**ಓ.ಎಸ್.ನಂಃ 262/2017**

**ಡಿಡಬ್ಲ್ಯೂ-1**

**<u>ಸಾಕ್ಷಿಯನ್ನು ಕರೆಯಿಸಿ ದಿನಾಂಕಃ 30.07.2026 ರಂದು ಪ್ರಮಾಣಿಕರಿಸಲಾಯಿತು.</u>**

**<u>ಮುಂದುವರೆದ ಪಾಟೀ ಸವಾಲು: ವಾದಿ ಪರ ವಕೀಲರಿಂದಃ</u>**

ನನ್ನ ತಂದೆ ನಿಡಿ7 ನ್ನು ಸಲ್ಲಿಸುವ ಕಾಲಕ್ಕೆ ಈ ದಾವೆ ಚಾಲ್ತಿಯಲ್ಲಿ ಇತ್ತು ಎಂದರೆ ಸರಿಯಲ್ಲ. ನಿಡಿ7 ರಲ್ಲಿ ವಾದಿಯನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಪತ್ರಿಕಾ ಪ್ರಕಟಣೆ ಹೊರಡಿಸಲಾಗಿತ್ತು ಎಂದು ನುಡಿಯುತ್ತಾರೆ. ವಾದಿಗೆ ಓದು ಬರಹ ಬರದ ಕಾರಣ ಪತ್ರಿಕಾ ಪ್ರಕಟಣೆಯಲ್ಲಿ ಪ್ರಕಟವಾಗಿದ್ದ ವಿಷಯವನ್ನು ತಿಳಿಯಲಾಗಿಲ್ಲ ಎಂದರೆ ಸರಿಯಲ್ಲ. ನಿಡಿ7 ರಲ್ಲಿ ಸರ್ವೇ ನಂಃ 37/2 ನ್ನು ನಮೂದಿಸಲಾಗಿತ್ತು ಎಂದರೆ ಸರಿ. ಆದರೆ ಪತ್ರಿಕಾ ಪ್ರಕಟಣೆ ಹೊರಡಿಸುವಾಗಿ ಸರ್ವೇ ನಂಬರ್ ನ್ನು ಉದ್ದೇಶಪೂರ್ವಕವಾಗಿ ಸರ್ವೇ ನಂಃ 27/2 ಎಂದು ನಿಡಿ6 ರಂತೆ ಪ್ರಕಟಿಸಲಾಗಿತ್ತು ಎಂದರೆ ಸರಿಯಲ್ಲ. ನಿಡಿ6 ರಲ್ಲಿ ನಿಖರವಾದ ಸರ್ವೇ ನಂಬರ್ ನ್ನು ನಮೂದಿಸಿದ್ದರೆ ವಾದಿ ನಿಡಿ7 ರ ವ್ಯವಹರಣೆಗೆ ಹಾಜರಾಗುತ್ತಿದ್ದರು ಎಂದರೆ ಸರಿಯಲ್ಲ. ನಿಡಿ7 ರ ಆದೇಶ ವಾದಿಗೆ ಬಂಧನಕಾರ್ಯವಾಗುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

**(ಗಿರೀಶ ಆರ್.ಬಿ)**

ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ

ಗುಂಡ್ಲುಪೇಟೆ